ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.

ಸಿ.ಸಿ.ನಂ.4732/2023

ಪಿ.ಡಬ್ಲ್ಯೂ -01
ಸಿ.ಡಬ್ಲ್ಯೂ-02

ಸಾಕ್ಷಿದಾರನ ಹೆಸರುಃ- ಗಂಗಾಧರ
ತಂದೆಯ ಹೆಸರುಃ- ಗಂಗಣ್ಣ
ವಯಸ್ಸುಃ- 60 ವರ್ಷ
ಉದ್ಯೋಗಃ- ನಿವೃತ್ತ ಉಪನಿರೀಕ್ಷಕರು
ವಾಸಃ- ತುಮಕೂರು

**ಸಾಕ್ಷಿಗೆ ದಿಃ03.09.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ನಾನು 03.11.2018 ರಿಂದ 02.01.2021 ರವೆಗೆ ಲೋಕಾಯುಕ್ತ ಇನ್ಸ್‌ಪೇಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 29.07.2019 ರಂದು ಮಾನ್ಯ ಲೋಕಾಯುಕ್ತ ಎಸ್.ಪಿ ಸಾಹೇಬರ್ ಆದೇಶದ ಮೇರೆಗೆ ಅಮೃತೂರು ಹೋಬಳಿ ತಾವರೆಕೆರೆ ಗ್ರಾಮದ ಹೊನ್ನೆಗೌಡನ ದೊಡ್ಡಿ ಕ್ರಾಸ್ ಬಳಿ ಇರುವ ಸರಕಾರಿ ಪ್ರೌಢ ಶಾಲೆಯ ಮುಂಭಾಗ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂಬ ಮಾಹಿತಿ ಮೇರೆಗೆ ನಾನು ಚಾ.ಸಾ. 6 ಮತ್ತು ಪ್ರಕಾಶ ಹೋಗಿ ನೋಡಲಾಗಿ ನಮ್ಮ ಪರಿಚಯ ಮಾಡಿಕೊಂಡು ಅಂಗಡಿ ಮಾಲಿಕರಾದ ಸೋಮಶೇಖರ ಬಿನ್ ರಾಮಪ್ಪ 23 ವರ್ಷ ನಿಮ್ಮ ಅಂಗಡಿಯಲ್ಲಿ ಅಭಕಾರಿ ವಸ್ತುಗಳನ್ನು ಮಾರಾಟ ಮಾಡುತ್ತಿದ್ದೀರಿ ಎಂದು ಕೇಳಲಾಗಿ ಯಾವುದೇ ಅಭಕಾರಿ ವಸ್ತುಗಳನ್ನು ಮಾರಾಟ ಮಾಡುತ್ತಿಲ್ಲವೆಂದು ತಿಳಿಸಿರುತ್ತಾರೆ. ನಂತರ ನಾವು ಅಂಗಡಿಯನ್ನು ಶೋಧನೆ ಮಾಡಲಾಗಿ ಸುಮಾರು 9 ಲೀಟರ್ ಮದ್ಯದ ವಸ್ತುಗಳು ದೊರೆತ ಮೇರೆಗೆ ಅಭಕಾರಿ ಸಬ್ ಇನ್ಸ್‌ಪೇಕ್ಟರ್ ಅವರಿಗೆ ಪೋನ್ ಮಾಡಿ ವಿಷಯ ತಿಳಿಸಿ ಕರೆಸಿ ಅವರಿಗೆ ಆರೋಪಿ ಮತ್ತು ಮು. ಮಾ. ಗಳನ್ನು ನೀಡಿ ಅವರ ಅವಶಕ್ಕೆ ನೀಡಿರುತ್ತೇವೆ. ಈ ಬಗ್ಗೆ ಪ್ರಕರಣ ದಾಖಲಿಸಿ ವರದಿ ನೀಡುವಂತೆ ದೂರನ್ನು ನೀಡಿರುತ್ತೇವೆ. ಆರೋಪಿ

ಮತ್ತು ಮು. ಮಾ. ಗಳನ್ನು ಗುರುತಿಸುತ್ತೇನೆ. ದೂರಿಗೆ ನನ್ನ ಸಹಿ ಇರುತ್ತದೆ. ಅದನ್ನು ನಿ. ಪಿ 3 ಎಂದು ಸಹಿಯನ್ನು ನಿ.ಪಿ 3(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತಪರಃ ಜಿ.ಎ.ಆರ್. ವಕೀಲರಿಂದಃ**

ದಿನಾಂಕ 29.07.2019 ರಂದು ಬೆಳಿಗ್ಗೆ 9 ಗಂಟೆಗೆ ಲೋಕಾಯುಕ್ತ ಎಸ್.ಪಿ ಅವರು ನೀಡಿದ ನಿರ್ದೇಶನದ ಮೇರೆಗೆ ನಾನು ಸ್ಥಳಕ್ಕೆ ಹೋಗಿರುತ್ತೇನೆ. ಸದರಿ ನಿರ್ದೇಶನ ಪ್ರತಿಯನ್ನು ದೂರಿನೊಂದಿಗೆ ಕುಣಿಗಲ್ ಅಭಕಾರಿ ಪೋಲಿಸರಿಗೆ ನೀಡಿರುವುದಿಲ್ಲ. ಆ ದಿನ ನಾನು ಬೆಳಿಗ್ಗೆ 9 ಗಂಟೆಗೆ ಲೋಕಾಯುಕ್ತ ಕಚೇರಿಯಲ್ಲಿದ್ದೆ. ಸದರಿ ದಿನಾಂಕದಂದು ನನ್ನನ್ನು ಈ ಮೇಲೆ ಹೇಳಿದ ಕರ್ತವ್ಯಕ್ಕೆ ನಿಯೋಜಿಸಿರುತ್ತಾರೆ. ಕರ್ತವ್ಯಕ್ಕೆ ನಿಯೋಜಿಸಿದ ಬಗ್ಗೆ ಲೋಕಾಯುಕ್ತದಲ್ಲಿ ಎಸ್.ಹೆಚ್. ಡಿ ಅನ್ನು ನಾವು ಇಟ್ಟಿರುವುದಿಲ್ಲ. ತುಮಕೂರಿನಿಂದ ಹೊನ್ನಗೌಡನ ದೊಡ್ಡಿಗೆ ಹೋಗಲು 2 ಗಂಟೆ ಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ 4 ಗಂಟೆಗೆ ಬಂದಿರುತ್ತೇನೆ. ತುಮಕೂರಿನಿಂದ ನಾನು ಸರಕಾರಿ ವಾಹನದಲ್ಲಿ ಇಬ್ಬರೂ ಸಿಬ್ಬಂದಿಯೊಂದಿಗೆ ಬಂದಿದ್ದು ವಾಹನ ಸಂಖ್ಯೆ ನನಗೆ ನೆನಪಿಲ್ಲ. ನಾನು ಕುಣಿಗಲ್ ಗೆ ಬಂದಾಗ ಎಷ್ಟು ಸಮಯ ಆಗಿತ್ತು ಎಂದು ನನಗೆ ನೆನಪಿಲ್ಲ.

ನಾನು ಕುಣಿಗಲ್ ಗೆ ಬಂದು ಅಭಕಾರಿ ಅಧಿಕಾರಿಗಳನ್ನು ಬೇಟಿ ಮಾಡಿ ಕರೆದುಕೊಂಡು ಹೋಗಿರುವುದಿಲ್ಲ. ನಾನು ತುಮಕೂರನಿಂದ ಕುಣಿಗಲ್ ಗೆ ಬಂದಾಗ ಮೊದಲು ದೂರನ್ನು ನೀಡಿರುವುದಿಲ್ಲ. ನಾನು ಹೊನ್ನೇಗೌಡನ ದೊಡ್ಡಿಗೆ ಹೋದಾಗ ಯಾವುದೇ ವ್ಯಕ್ತಿಯ ಮೇಲೆ ಎಫ್.ಐ.ಆರ್. ಆಗಿರಲಿಲ್ಲವೆಂದರೆ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಯಾವುದೇ ವ್ಯಕ್ತಿಯ ಮೇಲೆ ಎಫ್.ಐ.ಆರ್. ಆಗದೆ ದಸ್ತಗಿರಿ ಮಾಡಲು ಬರುವುದಿಲ್ಲ ಮತ್ತು ತಪಾಸಣೆ ಮಾಡಲು ಬರುವುದಿಲ್ಲವೆಂದರೆ ಸಾಕ್ಷಿ ಅದಕ್ಕೂ ಇದಕ್ಕೂ ಸಂಬಂದ ಇಲ್ಲವೆಂದು ಹೇಳುತ್ತಾರೆ.

ಯಾವುದೇ ಸಂಬಂಧ ಪಟ್ಟ ನ್ಯಾಯಾಧೀಶರ ಅನುಮತಿ ಇಲ್ಲದೆ ಶೋಧನೆ ಮಾಡಲು ಬರುವುದಿಲ್ಲವೆಂದರೆ ಸರಿಯಲ್ಲ. ಸುಮಾರು 9 ಲೀಟರ್ ಮದ್ಯ ಹೊನ್ನೇಗೌಡನ ದೊಡ್ಡಿಯ ಪೆಟ್ಟಿಗೆ ಅಂಗಡಿಯಲ್ಲಿ ದೊರೆತಿರುತ್ತೇನೆ. ದೂರಿನಲ್ಲಿ ಸಹ ಇಂತಿಷ್ಟೇ ಮದ್ಯ ದೊರೆತಿರುತ್ತೆಂದು ಉಲ್ಲೇಖ

ಮಾಡಿಲ್ಲವೆಂದರೆ ಸರಿಯಲ್ಲ. ಪ್ರೌಢ ಶಾಲೆಯಿಂದ ಪೆಟ್ಟಿಗೆ ಅಂಗಡಿ 100 ಮೀಟರ ದೂರದಲ್ಲಿದೆ. ನಾನು ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ ಮದ್ಯ ಸೇವನೇ ಮಾಡುವ ವ್ಯಕ್ತಿಗಳು ಅಥವಾ ಅವರು ಉಪಯೋಗಿಸಿ ಗ್ಲಾಸ್ ಬಾಟಲ್ ಗಳು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿಲ್ಲವೆಂದು ಹೇಳುತ್ತಾರೆ. ಸ್ಥಳಿಯರು ಪೆಟ್ಟಿಗೆ ಅಂಗಡಿಯಲ್ಲಿ ಮದ್ಯ ಮಾರಾಟ ಮಾಡುವ ಕುರಿತು ನನಗೆ ಹೇಳಿರುವುದಿಲ್ಲ. ಸದರಿ ಪೆಟ್ಟಿಗೆ ಅಂಗಡಿಯಲ್ಲಿ ದಿನಸೇ ಸಾಮಾನುಗಳು ಸಹ ಇದ್ದವು. ಸದರಿ ಪೆಟ್ಟಿಗೆ ಅಂಗಡಿಯ ವಿಸ್ತೀರ್ಣ ನನಗೆ ಗೊತ್ತಿಲ್ಲ.

ಸದರಿ ಪೆಟ್ಟಿಗೆ ಅಂಗಡಿಯ ದ್ವಾರ ದಕ್ಷಿಣಕ್ಕೆ ಇರುತ್ತದೆ. ಸದರಿ ಪೆಟ್ಟಿಗೆ ಅಂಗಡಿ ಆರೋಪಿಗೆ ಸೇರಿದ್ದು ಎಂದು ತೋರಿಸಲು ದಾಖಲೆ ನೋಡಿರುವುದಿಲ್ಲ. ಮು. ಮಾ. ಗಳನ್ನು ಜಪ್ತು ಮಾಡಿಕೊಂಡು ಸೀಜ್ ಮಾಡಲು ತೊಂದರೆ ಇರಲಿಲ್ಲವೆಂದರೆ ಸಾಕ್ಷಿ ಅಭಕಾರಿಯರಿಗೆ ನೀಡಿದ್ದೇವೆ ಎಂದು ಹೇಳುತ್ತಾರೆ. 8 ಎಂ.ಎಂ. ನ 2 ಟಟ್ರಾ ಪ್ಯಾಕೇಟ್ ಗಳು ನ್ಯಾಯಾಲಯದ ಮುಂದೆ ಇರುತ್ತವೆ ಎಂದರೆ ಸರಿ. ಹೈ ವಾರ್ಡ್ಸ್ 1 ಪ್ಯಾಕೇಟ್ ಇದೆ ಎಂದರೆ ಇರಬಹುದು ಎಂದು ಹೇಳುತ್ತಾರೆ. ದೂರಿನಲ್ಲಿ ಹೈ ವಾರ್ಡ್ಸ್ 1 ಪ್ಯಾಕೇಟ್ ದೊರೆತಿರುವ ಬಗ್ಗೆ ಬರೆಯಲಾಗಿದೆ. ಸದರಿ ಅಗಂಡಿಯಲ್ಲಿ ನಾನು ವಶಕ್ಕೆ ಪಡೆದು ಮು. ಮಾ. ಗಳು ಈ ದಿನ ನ್ಯಾಯಾಲಯದ ಮುಂದೆ ಇರುವಂತೆಯೇ ಇದ್ದವು ಎಂದು ಹೇಳುತ್ತಾರೆ. ಎಲ್ಲವೂ ಸಹ ತೆರೆದಿರುತ್ತವೆ.

ನಾನು ಹೇಳಿದ ರೀತಿಯಲ್ಲಿ ನಾನು ಎಸ್.ಪಿ ಅವರ ನಿರ್ದೇಶನದ ಮೇರೆಗೆ ಸ್ಥಳಕ್ಕೆ ಬೇಟಿ ನೀಡಿಲ್ಲ ಅಲ್ಲಿ ಯಾವುದೇ ಮದ್ಯ ದೊರೆತಿಲ್ಲವೆಂದರೆ ಸರಿಯಲ್ಲ. ಹೊನ್ನೇಗೌಡನ ದೊಡ್ಡಿಯ ಪ್ರೌಢ ಶಾಲೆಯ ಕ್ರಾಸ್ ಬಳಿ ಸೋಮಶೇಖರ ಅವರಿಗೆ ಸೇರಿದ ಅಂಗಡಿ ಇರುವುದಿಲ್ಲವೆಂದರೆ ಸರಿಯಲ್ಲ. ನಾನು ಅಂಕಿ ಸಂಖ್ಯೆಗಳ ಲೆಕ್ಕಕ್ಕಾಗಿ ಸುಳ್ಳು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಿನ ನನ್ನ ಜೊತೆ ಕುಣಿಗಲ್ ನ ಅಭಕಾರಿ ಅಧಿಕಾರಿ ಯಾರು ಬಂದಿರಲಿಲ್ಲ ನಾನು ಸಹ ಸ್ಥಳಕ್ಕೆ ಹೋಗಿಲ್ಲವೆಂದರೆ ಸರಿಯಲ್ಲ. ಅಭಕಾರಿ ಅಧಿಕಾರಿಗಳಿಗೆ ತೆರೆದ ಮದ್ಯದ ಪ್ಯಾಕೇಟ್ ಗಳು ಸಿಗುತ್ತಿದ್ದು ಅವರನ್ನು ಹಿಡಿದುಕೊಂಡು ಆರೋಪಿತನ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಸ್ವಂತಂತ್ರವಾಗಿ ಕೆಳಗಿನ ಅಧಿಕಾರಿಗಳಿಗೆ ಅಭಕಾರಿ ವಸ್ತುಗಳನ್ನು ನೀಡಿರುವುದಿಲ್ಲ. ನಾನು ಹೊನ್ನೆಗೌಡನ ದೊಡ್ಡಿಯನ್ನು ಬಿಟ್ಟು ಹೋರಟಾಗ 7 ಗಂಟೆ ಸಮಯವಾಗಿರುತ್ತದೆ ಎಂದರೆ ಸರಿ. ಸದರಿ ಸಮಯಕ್ಕೆ ಮಹಜರ ಮಾಡಿದ್ದು ನಾನು ನೋಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಮು. ಮಾ. ಗಳನ್ನು ವಶಪಡಿಸಿಕೊಂಡಿಲ್ಲ ಮತ್ತು ಆರೋಪಿಯನ್ನು ವಶಕ್ಕೆ ಪಡೆದಿಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ/-**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**

**ಕುಣಿಗಲ್.**